**All India Radio: Bangalore**
**National Bulletin In Kannada**
**12.06.2025 / 7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**12.06.2025 / 7.35 am**

**><><><><><><**

<u>ಮುಖ್ಯಾಂಶಗಳು</u>

**೧. ಆರು ಸಾವಿರದ ೪೦೫ ಕೋಟಿ ರೂಪಾಯಿಗಳ ಎರಡು ರೈಲ್ವೆ ಯೋಜನೆಗಳಿಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ**

**೨. ಪಾಕಿಸ್ತಾನದ ಭಯೋತ್ಪಾದನೆ ಕೇವಲ ದ್ವಿಪಕ್ಷೀಯ ಸಮಸ್ಯೆಯಲ್ಲ, ಜಾಗತಿಕ ಕಾಳಜಿ: ವಿದೇಶಾಂಗ ಸಚಿವ ಜೈಶಂಕರ್**

**೩. ವಿವಿಧ ಕ್ಷೇತ್ರಗಳಲ್ಲಿ ಭಾರತ-ಸ್ವೀಡನ್ ಸಹಯೋಗ ಮತ್ತಷ್ಟು ಬಲಪಡಿಸಲು ಪರಸ್ಪರ ಒಪ್ಪಿಗೆ**

**೪. ಎಫ್ಐಎಚ್ ಹಾಕಿ ಪ್ರೊ ಲೀಗ್: ಇಂದು ಭಾರತ-ಅರ್ಜೆಂಟೀನಾ ಮುಖಾಮುಖಿ**

**><><><><><><><><><**

ಕೇಂದ್ರ ಸಚಿವ ಸಂಪುಟವು ರೈಲ್ವೆ ಸಚಿವಾಲಯದ ಎರಡು ಯೋಜನೆಗಳಿಗೆ ಅನುಮೋದನೆ ನೀಡಿದೆ. ಒಟ್ಟು ೬ ಸಾವಿರದ ೪೦೫ ಕೋಟಿ ರೂಪಾಯಿಗಳ ಯೋಜನೆಗಳಲ್ಲಿ ಕರ್ನಾಟಕದ ಬಳ್ಳಾರಿ-ಚಿಕ್ಕಜಾಜೂರ್ ಮತ್ತು ಜಾರ್ಖಂಡ್‌ನ ಕೊಡೆರ್ಮಾ-ಬರ್ಕಕಾ ನಡುವಿನ ರೈಲ್ವೆ ಡಬ್ಲಿಂಗ್ ಮಾರ್ಗಗಳು ಸೇರಿವೆ. ಈ ಕುರಿತು ನವದೆಹಲಿಯಲ್ಲಿ ಮಾಧ್ಯಮಗಳಿಗೆ ಮಾಹಿತಿ ನೀಡಿದ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ೧೩೩ ಕಿಲೋಮೀಟರ್‌ಗಳ ಕೊಡೆರ್‌ಮಾ-ಬರ್‌ಕರಾ ರೈಲ್ವೆ ಡಬ್ಲಿಂಗ್ ಯೋಜನೆಯು ೯೩೮ ಹಳ್ಳಿಗಳು ಮತ್ತು ೧೫ ಲಕ್ಷ ಜನರಿಗೆ ವರ್ಧಿತ ಸಂಪರ್ಕವನ್ನು ಒದಗಿಸುತ್ತದೆ ಎಂದು ಹೇಳಿದರು. ಈ ಯೋಜನೆಗಳು ಜಾರ್ಖಂಡ್‌ನ ನಾಲ್ಕು ಜಿಲ್ಲೆಗಳಾದ ಕೊಡೆರ್ಮಾ, ಛತ್ರ, ಹಜಾರಿಭಾಗ್ ಮತ್ತು ರಾಮ್‌ಗಢವನ್ನು ಸಂಪರ್ಕಿಸುತ್ತವೆ. ಯೋಜನಾ

ವಿಭಾಗವು ಜಾರ್ಖಂಡ್‌ನ ಪ್ರಮುಖ ಕಲ್ಲಿದ್ದಲು ಉತ್ಪಾದಿಸುವ ಪ್ರದೇಶದ ಮೂಲಕ ಹಾದು ಹೋಗುತ್ತದೆ ಎಂದು ಅವರು ಮಾಹಿತಿ ನೀಡಿದರು. ೧೮೫ ಕಿಲೋಮೀಟರ್‌ಗಳ ಬಳ್ಳಾರಿ ಚಿಕ್ಕಜಾಜೂರ್ ರೈಲ್ವೆ ಡಬ್ಲಿಂಗ್ ಯೋಜನೆಯು ಮಂಗಳೂರು ಬಂದರನ್ನು ಸಿಕಂದರಾಬಾದ್‌ಗೆ ಸಂಪರ್ಕಿಸುತ್ತದೆ. ಈ ಯೋಜನೆಯ ಮಾರ್ಗವು ಕರ್ನಾಟಕದ ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳು ಹಾಗೂ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಮೂಲಕ ಹಾದು ಹೋಗುತ್ತದೆ ಎಂದು ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

**ಧ್ವನಿ: ಅಶ್ವಿನಿವೈಷ್ಣವ್, (೩೪ ಸೆಕೆಂಡ್ಸ್)**

**><><><><><><><><><><**

ಭಾರತ ಮತ್ತು ಪಾಕಿಸ್ತಾನದ ನಡುವಿನ ಉದ್ವಿಗ್ನತೆ ಕೇವಲ ದ್ವಿಪಕ್ಷೀಯ ಸಮಸ್ಯೆಯಲ್ಲ. ಬದಲಾಗಿ ಭಯೋತ್ಪಾದನೆಯ ಬಗ್ಗೆ ಜಾಗತಿಕ ಕಳವಳವಾಗಿದೆ. ಈ ಬೆದರಿಕೆಯು ಅಂತಿಮವಾಗಿ ವಿಶ್ವದ ಉಳಿದ ಭಾಗಗಳನ್ನು ಕಾಡಲಿದೆ ಎಂಬುದನ್ನು ಜಗತ್ತು ಅರ್ಥಮಾಡಿಕೊಳ್ಳಬೇಕು ಎಂದು ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಹೇಳಿದ್ದಾರೆ. ಬ್ರಸೆಲ್ಸ್‌ನಲ್ಲಿ ಯುರೋಪಿಯನ್ ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅವರು, ಪಾಕಿಸ್ತಾನದ ಮಿಲಿಟರಿ ಪಟ್ಟಣದಲ್ಲಿ ವರ್ಷಗಳ ಕಾಲ ಭಯೋತ್ಪಾದಕ ಒಸಾಮಾ ಬಿನ್ ಲಾಡೆನ್ ಸುರಕ್ಷಿತವಾಗಿ ವಾಸಿಸುತ್ತಿದ್ದ. ಆತನಿಗೆ ಪಾಕಿಸ್ತಾನ ಏಕೆ ಆಶ್ರಯ ನೀಡಿತು ಎಂದು ಪ್ರಶ್ನಿಸಿದರು. ಇನ್ನೊಂದೆಡೆ, ಭವಿಷ್ಯದಲ್ಲಿ ಉತ್ತಮ ಭಾರತ-ಐರೋಪ್ಯ ಸಂಬಂಧಗಳ ಬಗ್ಗೆ ಸಚಿವ ಡಾ. ಎಸ್. ಜೈಶಂಕರ್ ಆಶಿಸಿದರು.

**><><><><><><><><><><**

ಭಾರತ ಮತ್ತು ಸ್ವೀಡನ್ ದೇಶಗಳು ಶುದ್ಧ ಇಂಧನ, ಡಿಜಿಟಲ್ ತಂತ್ರಜ್ಞಾನ, ಹವಾಮಾನ, ಆರೋಗ್ಯ ರಕ್ಷಣೆ ಮತ್ತು ಜೀವ ವಿಜ್ಞಾನಗಳು, ಕೌಶಲ್ಯ ಅಭಿವೃದ್ಧಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಯೋಗವನ್ನು ಬಲಪಡಿಸುವ ಬಗ್ಗೆ ಚರ್ಚಿಸಿವೆ. ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್, ಸ್ಟಾಕ್‌ಹೋಮ್‌ನಲ್ಲಿ ಅಂತಾರಾಷ್ಟ್ರೀಯ ಅಭಿವೃದ್ಧಿ ಸಹಕಾರ ಮತ್ತು ವಿದೇಶಿ ವ್ಯಾಪಾರ ಸಚಿವ ಬೆಂಜಮಿನ್ ಡೌಸಾ ಮತ್ತು ಸ್ವೀಡನ್‌ನ ವಿದೇಶಿ ವ್ಯಾಪಾರದ ರಾಜ್ಯ ಕಾರ್ಯದರ್ಶಿ ಹಕನ್ ಜೆವ್ರೆಲ್

ಅವರೊಂದಿಗೆ ಸಭೆ ನಡೆಸಿದರು. ಭಾರತದ ಬೆಳೆಯುತ್ತಿರುವ ಮೂಲಸೌಕರ್ಯ ಮತ್ತು ಉತ್ಪಾದನಾ ವಲಯಗಳಲ್ಲಿ ಹೆಚ್ಚಿನ ಭಾಗವಹಿಸುವಿಕೆಗಾಗಿ ಸ್ವೀಡನ್‌ಗೆ ಇದೇ ವೇಳೆ ಸಚಿವ ಗೋಯಲ್ ಆಹ್ವಾನಿಸಿದರು. ಭಾರತ-ಸ್ವೀಡನ್ ವ್ಯಾಪಾರ ನಾಯಕರ ದುಂಡುಮೇಜಿನ ಸಭೆ ಉದ್ದೇಶಿಸಿ ಮಾತನಾಡಿದ ಸಚಿವರು, ವ್ಯಾಪಾರ, ನಾವೀನ್ಯತೆ ಮತ್ತು ಹೂಡಿಕೆಯಲ್ಲಿ ಸಹಯೋಗ ಬೆಳೆಸಲು ಎರಡೂ ರಾಷ್ಟ್ರಗಳ ವ್ಯಾಪಾರ ನಾಯಕರನ್ನು ಒಟ್ಟುಗೂಡಿಸಲು ಇದು ಒಂದು ಮೂಲಾಧಾರ ವೇದಿಕೆಯಾಗಿ ಹೊರಹೊಮ್ಮಿದೆ ಎಂದು ಹೇಳಿದರು. ನಾವೀನ್ಯತೆ, ತಾಂತ್ರಿಕ ಪ್ರಗತಿ ಮತ್ತು ಪರಸ್ಪರ ಸಮೃದ್ಧಿಯ ಆಧಾರದ ಮೇಲೆ ಎರಡು ರಾಷ್ಟ್ರಗಳ ನಡುವೆ ಪಾಲುದಾರಿಕೆಯನ್ನು ಬಲಗೊಳಿಸುವ ಅಗತ್ಯವನ್ನು ಸಚಿವ ಪಿಯೂಷ್ ಗೋಯಲ್ ಒತ್ತಿ ಹೇಳಿದರು.

><><><><><><><><><><

ಕಳೆದ ಒಂದು ದಶಕದಲ್ಲಿ ಭಾರತ, ಸರ್ವತೋಮುಖವಾಗಿ ಗಮನಾರ್ಹ ಬದಲಾವಣೆಯನ್ನು ಕಂಡಿದ್ದು, ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣದ ತತ್ವದಡಿ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರ ಕಳೆದ ೧೧ ವರ್ಷಗಳಲ್ಲಿ ಕೈಗೊಂಡಿರುವ ಹಲವು ಪ್ರಮುಖ ಪ್ರಯತ್ನಗಳ ಕುರಿತು ಆಕಾಶವಾಣಿ ಸುದ್ದಿ ವಿಭಾಗ ವಿಶೇಷ ವರದಿಯನ್ನು ಪ್ರಸಾರ ಮಾಡುತ್ತಿದೆ. ಇಂದಿನ ಮಾಲಿಕೆಯಲ್ಲಿ ನಾರಿ ಶಕ್ತಿ - ಮಹಿಳೆಯರು ಆರ್ಥಿಕ ಬದಲಾವಣೆಯ ಚಾಲಕರು ಕುರಿತ ವರದಿ ಇಲ್ಲಿದೆ.

**ಧ್ವನಿ : ವಿಶೇಷ ವರದಿ (ಚೇತನ್)**

ಕಳೆದ ದಶಕದಲ್ಲಿ, ಭಾರತವು ಮಹಿಳೆಯರ ನೇತೃತ್ವದ ಮೌನ ಆರ್ಥಿಕ ಕ್ರಾಂತಿಗೆ ಸಾಕ್ಷಿಯಾಗಿದೆ. ಹಳ್ಳಿಗಳಲ್ಲಿನ ಸ್ವ-ಸಹಾಯ ಗುಂಪುಗಳಿಂದ ಹಿಡಿದು ನಗರಗಳಲ್ಲಿನ ಉದ್ಯಮಿಗಳವರೆಗೆ, ಮಹಿಳೆಯರು ಆರ್ಥಿಕತೆಯಲ್ಲಿ ಕೇವಲ ಭಾಗವಹಿಸುವವರಲ್ಲ; ಅವರು ಬದಲಾವಣೆಯ ಪ್ರಬಲ ಚಾಲಕರಾಗಿದ್ದಾರೆ. ಪ್ರಧಾನ ಮಂತ್ರಿ ಮುದ್ರಾ ಯೋಜನೆಯಡಿಯಲ್ಲಿ ವಿತರಿಸಲಾದ ೫೨ ಕೋಟಿ ೫೦ ಲಕ್ಷ ಸಾಲಗಳಲ್ಲಿ, ಸುಮಾರು ೬೮ ಪ್ರತಿಶತವನ್ನು ಮಹಿಳೆಯರಿಗೆ ನೀಡಲಾಗಿದೆ. ಇದು ಸಣ್ಣ ವ್ಯವಹಾರಗಳನ್ನು ಪ್ರಾರಂಭಿಸಲು, ಉದ್ಯಮಗಳನ್ನು ವಿಸ್ತರಿಸಲು ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಸಾಧಿಸಲು ಅವರಿಗೆ ಸಹಾಯ ಮಾಡುತ್ತದೆ. ಸ್ಟ್ಯಾಂಡ್-ಅಪ್ ಇಂಡಿಯಾ ಯೋಜನೆಯಡಿಯಲ್ಲಿ, ಉದ್ಯಮಶೀಲತೆಯನ್ನು ಉತ್ತೇಜಿಸಲು ೨.೭ ಲಕ್ಷಕ್ಕೂ ಹೆಚ್ಚು ಸಾಲಗಳನ್ನು ಮಂಜೂರು

ಮಾಡಲಾಗಿದೆ. ಸುಮಾರು ೮೩ ಪ್ರತಿಶತ ಮಹಿಳೆಯರಿಗೆ ಇದರಿಂದ ಲಾಭವಾಗಿದೆ.ತಳಮಟ್ಟದಲ್ಲಿ, ದೀನದಯಾಳ್ ಅಂತ್ಯೋದಯ ಯೋಜನೆ - ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್, ೧೦ ಕೋಟಿಗೂ ಹೆಚ್ಚು ಗ್ರಾಮೀಣ ಮಹಿಳೆಯರನ್ನು ಸುಮಾರು ೯೧ ಲಕ್ಷ ಸ್ವ-ಸಹಾಯ ಗುಂಪುಗಳಲ್ಲಿ ಸಜ್ಜುಗೊಳಿಸಿದೆ. ಲಕ್ಷಾಧಿಪತಿ ದೀದಿ ಉಪಕ್ರಮವು ೧ ಕೋಟಿ ೪೮ ಲಕ್ಷಕ್ಕೂ ಹೆಚ್ಚು ಸ್ವ-ಸಹಾಯ ಸಂಘಗಳ ಸದಸ್ಯರಿಗೆ ಕನಿಷ್ಠ ಒಂದು ಲಕ್ಷ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ವಾರ್ಷಿಕ ಆದಾಯ ಗಳಿಸಲು ಅನುವು ಮಾಡಿಕೊಟ್ಟಿದೆ. ಬಾಹ್ಯಾಕಾಶ ಕಾರ್ಯಾಚರಣೆಗಳಿಂದ ಹಿಡಿದು ತಳಮಟ್ಟದ ಆಡಳಿತದವರೆಗೆ, ಅಡುಗೆ ಮನೆಗಳಿಂದ ಬೋರ್ಡ್‌ರೂಮ್‌ಗಳವರೆಗೆ, ನಾರಿ ಶಕ್ತಿಯು ಎಂದಿಗಿಂತಲೂ ಬಲವಾದ, ಮುಕ್ತ ಮತ್ತು ಹೆಚ್ಚು ದೃಢನಿಶ್ಚಯದಿಂದ ಮುಂದೆ ಸಾಗುತ್ತಿದೆ.

><><><><><><><><><

ಕಲ್ಯಾಣ ಆಧಾರಿತ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ಅಚಲ ಬದ್ಧತೆಯನ್ನು ಪ್ರಧಾನಿ ನರೇಂದ್ರ ಮೋದಿ ಪುನರುಚ್ಚರಿಸಿದರು. ಇದು ವಿವಿಧ ಜನಪರ ಯೋಜನೆಗಳು ಗರಿಷ್ಠ ಸಂಖ್ಯೆಯ ನಾಗರಿಕರನ್ನು ತಲುಪುವುದನ್ನು ಖಚಿತಪಡಿಸುತ್ತವೆ ಎಂದು ಅವರು ಹೇಳಿದರು. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಇತ್ತೀಚಿನ ಮಾಹಿತಿಯ ಪ್ರಕಾರ, ಭಾರತದ ಸಾಮಾಜಿಕ ಭದ್ರತಾ ವ್ಯಾಪ್ತಿಯು ೨೦೧೫ರಲ್ಲಿ ಶೇಕಡ ೧೯ ರಿಂದ ೨೦೨೫ರವರೆಗೆ ಶೇಕಡ ೬೪.೩ಕ್ಕೆ ಏರಿಕೆಯಾಗಿದೆ. ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಡಾ. ಮನ್ಸುಖ್ ಮಾಂಡವೀಯ ಅವರ ಸಾಮಾಜಿಕ ಮಾಧ್ಯಮ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಪ್ರಧಾನಿ ಮೋದಿ, ಈ ಉಪಕ್ರಮಗಳ ಪರಿಣಾಮಕಾರಿತ್ವ ಮತ್ತು ವ್ಯಾಪ್ತಿಯ ಏರಿಕೆಯನ್ನು ಶ್ಲಾಘಿಸಿದ್ದಾರೆ.

><><><><><><><><><

ಜುಲೈ ೧ ರಿಂದ ಆಧಾರ್‌ನೊಂದಿಗೆ ತಮ್ಮ ಐಆರ್‌ಸಿಟಿಸಿ ಖಾತೆಯನ್ನು ದೃಢೀಕರಿಸಿದ ಬಳಕೆದಾರರು ಮಾತ್ರ ಐಆರ್‌ಸಿಟಿಸಿ ವೆಬ್‌ಸೈಟ್ ಮತ್ತು ಅಪ್ಲಿಕೇಷನ್ ಮೂಲಕ ಆನ್‌ಲೈನ್ ತತ್ಕಾಲ್ ಟಿಕೆಟ್‌ಗಳನ್ನು ಬುಕ್ ಮಾಡಲು ಸಾಧ್ಯವಾಗುತ್ತದೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ.

><><><><><><><><><

ಮುಂದಿನ ಮೂರು ದಿನಗಳಲ್ಲಿ ಕರ್ನಾಟಕ, ಕೊಂಕಣ, ಗೋವಾ, ಕೇರಳ, ಮಾಹೆ, ಮಹಾರಾಷ್ಟ್ರ, ತಮಿಳುನಾಡು, ಪುದುಚೇರಿ ಮತ್ತು ಕಾರೈಕಲ್‌ನಲ್ಲಿ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಇಂದು ಕೇರಳ ಮತ್ತು ಮಾಹೆಯ ಪ್ರತ್ಯೇಕ ಸ್ಥಳಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಹಾಗೂ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಬಿಹಾರ, ಆಂಧ್ರಪ್ರದೇಶ, ಮಧ್ಯಪ್ರದೇಶ, ತೆಲಂಗಾಣ ಮತ್ತು ಉತ್ತರಾಖಂಡದ ಪ್ರತ್ಯೇಕ ಸ್ಥಳಗಳಲ್ಲಿ ಬಿರುಗಾಳಿಯೊಂದಿಗೆ ಗುಡುಗು ಸಹಿತ ಮಳೆಯಾಗುವ ನಿರೀಕ್ಷೆಯಿದೆ.

><><><><><><><><><><

ಎಫ್‌ಐಎಚ್ ಹಾಕಿ ಪ್ರೊ ಲೀಗ್‌ನಲ್ಲಿ, ಭಾರತೀಯ ಪುರುಷರ ತಂಡವು ಇಂದು ಸಂಜೆ ನೆದರ್‌ಲ್ಯಾಂಡ್ಸ್‌ನ ಆಮ್‌ಸ್ಟೆಲ್ವೀನ್‌ನಲ್ಲಿರುವ ವ್ಯಾಜೆನರ್ ಹಾಕಿ ಕ್ರೀಡಾಂಗಣದಲ್ಲಿ ಅರ್ಜೆಂಟೀನಾ ತಂಡವನ್ನು ಎದುರಿಸಲಿದೆ. ಪಂದ್ಯ ಭಾರತೀಯ ಕಾಲಮಾನ ಸಂಜೆ ೦೯:೩೦ ಕ್ಕೆ ಪ್ರಾರಂಭವಾಗಲಿದೆ. ೧೧ ಪಂದ್ಯಗಳಿಂದ ೧೫ ಅಂಕಗಳನ್ನು ಗಳಿಸಿರುವ ಭಾರತ ತಂಡ, ಪ್ರಸ್ತುತ ಅಂಕ  ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ.

><><><><><><><><><><

ಲಂಡನ್‌ನ ಲಾರ್ಡ್ಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್-೨೦೨೫ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಆಸ್ಟ್ರೇಲಿಯಾ, ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೫೬.೪ ಓವರ್‌ಗಳಲ್ಲಿ ೨೧೨ ರನ್‌ಗಳಿಗೆ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು. ಮೊದಲ ಇನ್ನಿಂಗ್ಸ್ ಆರಂಭಿಸಿರುವ ದಕ್ಷಿಣ ಆಫ್ರಿಕಾ, ಪಂದ್ಯದ ಮೊದಲ ದಿನದ ಅಂತ್ಯದ ವೇಳೆಗೆ ೨೨ ಓವರ್‌ಗಳಿಗೆ ೪ ವಿಕೆಟ್ ಕಳೆದುಕೊಂಡು ೪೩ ರನ್ ಗಳಿಸಿದ್ದು, ಇಂದು ಇನ್ನಿಂಗ್ಸ್ ಮುಂದುವರಿಸಲಿದೆ.

><><><><><><><><><><